ಜನಪರ ಯೋಜನೆಗಳು

961 (1164) ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) : ಮಾನ್ಯ ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖಾ ವತಿಯಿಂದ ಅನುಷ್ಠಾನಗೊಳಿಸುತ್ತಿರುವ ವಿವಿಧ ಜನಪರ ಯೋಜನೆಗಳ ವಿವರಗಳೇನು; ಇಲಾಖೆಯು ಯೋಜನಾ ಅನುಷ್ಠಾನಕ್ಕಾಗಿ ಮಾಡುತ್ತಿರುವ ವಾರ್ಷಿಕ ವೆಚ್ಚದ ಮೊತ್ತ ಎಷ್ಟು?;

ಆ) ಪ್ರಾರಂಪರಿಕ ವೃತಿಗಳಾದ ವಸ್ತ್ರ ತಯಾರಿಕೆ, ಕೃಷಿ, ಮುಂತಾದ ಬಹಳಷ್ಟು ಗ್ರಾಮೀಣ ಪಾರಂಪರಿಕ ಮತ್ತು ಕರಕುಶಲ ಕಸುಬುಗಳಲ್ಲಿ ವೈಜ್ಞಾನಿಕ ರೀತಿನೀತಿಗಳನ್ನು ಅಳವಡಿಸಲು ಮತ್ತು ಅವುಗಳ ಆಧುನೀಕ ರಣಕ್ಕಾಗಿ ಅರಿವು ಮೂಡಿಸುವ ಮತ್ತು ವೈಜ್ಞಾನಿಕತೆಯ ಉಪಯೋಗವನ್ನು ಬಳಸಿಕೊಳ್ಳಲು ನೆರವಾಗುವ ಕಾರ್ಯಕ್ರಮಗಳನ್ನೇನಾದರೂ ಇಲಾಖೆಯು ಹಮ್ಮಿಕೊಂಡಿದೆಯೇ (ವಿವರಗಳನ್ನು ನೀಡುವುದು);

ಇ) ಇಂಥ ಪಾರಂಪರಿಕ ವೃತಿನಿರತದಿಂದ ವಿಷಯಗಳ ಸಂಗ್ರಹಣೆ ಮಾಡುವ ಮೂಲಕ ನೂತನ ತಂತ್ರಜ್ಞಾನದ ಅಳವಡಿಕೆಗಾಗಿ ಸಂಶೋಧನೆ ಮುಂತಾಗಿ ನವೀಕರಣ ಯೋಜನೆಗಳನ್ನು ಜಾರಿಗೊಳಿಸಿ ಸಾಂಪ್ರದಾಯಿಕ ವೃತ್ತಿಗಳಿಗೆ ತಂತ್ರಜ್ಞಾನದ ಸೌಲಭ್ಯವನ್ನು ಒದಗಿಸಿಕೊಡುವಲ್ಲಿ ಇಲಾಖೆಯು ಕಾರ್ಯಕ್ರಮಗಳನ್ನು ರೂಪಿಸುವುದೆ?

ಶ್ರೀ ಆನಂದ ವಸಂತ ಅಸ್ನೋಟಿಕ (ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) :

ಅ) ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖಾ ವ್ಯಾಪ್ತಿಯಡಿ 5 ಅಂಗ ಸಂಸ್ಥೆಗಳು ಮತ್ತು 1 ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹವು ಕಾರ್ಯನಿರ್ವಹಿಸುತ್ತಿದ್ದು, ಈ ಅಂಗ ಸಂಸ್ಥೆಗಳು ಮತ್ತು ದಾರ್ಶನಿಕ ಸಮೂಹವು ಅನುಷ್ಠಾನಗೊಳಿಸುತ್ತಿರುವ ಯೋಜನಾ ಕಾರ್ಯಕ್ರಮಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ಈ ಅನುಬಂಧಲ್ಲಿನ ಯೋಜನೆಗಳ ಅನುಷ್ಠಾನಕ್ಕಾಗಿ ಇಲಾಖೆಯು ಮಾಡುತ್ತಿರುವ ವಾರ್ಷಿಕ ವೆಚ್ಚ ರೂ. 36.60 ಕೋಟಿಗಳು.

ಆ) – ಇಲ್ಲ –
ಇ) ಉದ್ಭವಿಸುವುದಿಲ್ಲ.

ಅನುಬಂಧ

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಜನಪರ ಯೋಜನೆಗಳು:

1. **ವಿಜ್ಞಾನ ಮತ್ತು ತಂತ್ರಜ್ಞಾನ ಯೋಜನೆಗಳಡಿ** ಪ್ರಾದೇಶಿಕ ವಿಜ್ಞಾನ ಕೇಂದ್ರಗಳನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಸಮಾನುಪಾತ (50:50) ಅನುದಾನದೊಂದಿಗೆ ಧಾರವಾಡ, ಮಂಗಳೂರು ಮತ್ತು ಮೈಸೂರಿನಲ್ಲಿ ಪ್ರಾದೇಶಿಕ ವಿಜ್ಞಾನ ಕೇಂದ್ರಗಳ ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗುತ್ತಿದೆ.

2. **ಜಿಲ್ಲಾ ವಿಜ್ಞಾನ ಕೇಂದ್ರಗಳ ಯೋಜನೆಯಡಿ** ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಸಮಾನುಪಾತ (50:50) ಅನುದಾನದೊಂದಿಗೆ ರಾಜ್ಯದಲ್ಲಿ ಈ ಕೆಳಕಂಡ 10 ಜಿಲ್ಲೆಗಳಲ್ಲಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರಗಳ ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗುತ್ತಿದೆ.

1. ರಾಯಚೂರು, 2. ತುಮಕೂರು, 3. ಹಾವೇರಿ, 4. ಹಾಸನ, 5. ಶಿವಮೊಗ್ಗ, 6. ಬೆಳಗಾವಿ, 7. ಬಳ್ಳಾರಿ, 8. ಉತ್ತರ ಕನ್ನಡ, 9. ಕೊಡಗು, 10. ಬೀದರ್.

3. ಮಂಗಳೂರಿನ ಪಿಲಿಕುಳ ನಿಸರ್ಗಧಾಮದಲ್ಲಿ ನೂತನ **"ತಾರಾಲಯವನ್ನು" (Planetarium) ಸ್ಥಾಪಿಸಲು** ಕ್ರಮ ವಹಿಸಲಾಗುತ್ತಿದೆ.

4. **ವೈಜ್ಞಾನಿಕ ಸಂಸ್ಥೆಗಳಿಗೆ ಸಹಾಯಾನುದಾನ ಅಡಿಯಲ್ಲಿ** ಬೆಂಗಳೂರಿನ ಜವಹರಲಾಲ್ ನೆಹರು ತಾರಾಲಯದ ವತಿಯಿಂದ ನಂದಿಬೆಟ್ಟದಲ್ಲಿ ಖಗೋಳ ಪರಿವೀಕ್ಷಣೆಯ ಕೇಂದ್ರ ಸ್ಥಾಪನೆಗೆ ಕ್ರಮ ವಹಿಸಲಾಗುತ್ತಿದೆ.

5. ನ್ಯಾನೋ ತಂತ್ರಜ್ಞಾನಕ್ಕೆ ಬೆಂಬಲದ ಯೋಜನೆಯಡಿ ನ್ಯಾನೊ ತಂತ್ರಜ್ಞಾನ ಸಮ್ಮೇಳನವನ್ನು ಯಶಸ್ವಿಯಾಗಿ ಕಳೆದ 3 ವರ್ಷಗಳಿಂದ ಆಚರಿಸಿಕೊಂಡು ಬರಲಾಗುತ್ತಿದೆ.

6. ವೈಜ್ಞಾನಿಕ ಸಂಸ್ಥೆಗಳಿಂದ ಸಹಾಯಾನುದಾನದಡಿ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರವಿದ್ಯಾ ಮಂಡಳಿ, ಜವಹರಲಾಲ್ ನೆಹರು ತಾರಾಲಯ, ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪಗಳ ಉಸ್ತುವಾರಿ ಕೇಂದ್ರ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹಕ್ಕೆ ಸಹಾಯಾನುದಾನವನ್ನು ನೀಡಲಾಗುತ್ತಿದೆ. ಅವುಗಳ ಯೋಜನಾ ವಿವರಗಳು ಸಂಸ್ಥೆವಾರು ಈ ಕೆಳಕಂಡಂತಿದೆ.

1) ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ:

ಪ್ರೊ.ಯು.ಆರ್. ರಾವ್ ರವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಡಿ ಸ್ವಾಯತ್ತ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು ಪ್ರೌಢಶಾಲೆಯಿಂದ ಸ್ನಾತಕೋತ್ತರದ ವರೆಗಿನ ವಿವಿಧ ಶೈಕ್ಷಣಿಕ ಹಂತಗಳಲ್ಲಿ ಮೂಲ ವಿಜ್ಞಾನ ಶಿಕ್ಷಣವನ್ನು ಸದೃಢಗೊಳಿಸುವ ಮತ್ತು ಜನಸಾಮಾನ್ಯರಲ್ಲಿ ವಿಜ್ಞಾನ ಜಾಗೃತಿಯನ್ನು ಮೂಡಿಸುವ ಹಲವಾರು ಕಾರ್ಯಕ್ರಮಗಳನ್ನು ರಾಜ್ಯಧ್ಯಂತ ನಡೆಸಲಾಗುತ್ತಿದೆ.

2. ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಬೆಂಗಳೂರು.

ಪ್ರಾಥಮಿಕ, ಪ್ರೌಢಶಾಲೆ ಹಾಗೂ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಲ್ಲಿ ಹಾಗೂ ಜನಸಾಮಾನ್ಯರಲ್ಲಿ ವಿಜ್ಞಾನದ ಬಗ್ಗೆ ಹೆಚ್ಚಿನ ವೈಜ್ಞಾನಿಕ ಅರಿವನ್ನು ಮೂಡಿಸಲು ತರಬೇತಿ ಮತ್ತು ಪ್ರಾಯೋಗಿಕ ಕಾರ್ಯಕ್ರಮಗಳ ಪ್ರಾತ್ಯಕ್ಷಿಕೆಗಳು ಹಾಗೂ ಉಪನ್ಯಾಸ ಮಾಲೆಗಳನ್ನು ಖ್ಯಾತ ವಿಜ್ಞಾನಿಗಳು ಹಾಗೂ ಗಣ್ಯ ವ್ಯಕ್ತಿಗಳ ಹೆಸರಿನಲ್ಲಿ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದೆ.

ವಿಜ್ಞಾನ ವಸ್ತು ಪ್ರದರ್ಶನ, ರಸ ಪ್ರಶ್ನೆ ಕಾರ್ಯಕ್ರಮ ಸ್ಪರ್ಧೆ, ಕರ್ನಾಟಕ ವಿಜ್ಞಾನ ವಿದ್ಯಾ ಜಾಗೃತಿ – ಅಭಿನಂದನಾ ಸಮಾರಂಭ, ಅಖಿಲ ಕರ್ನಾಟಕ ಉದಯೋಜನ್ಮಖ ವಿಜ್ಞಾನ ಲೇಖಕರ ಶಿಬಿರ ವಿಶ್ವ ಪರಿಸರ

ದಿನಾಚರಣೆ, ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶ ಪೂರ್ವಾದೋಲನ ಕಾರ್ಯಾಗಾರ, ಸಾಧನಾ ಸಮಾವೇಶ ಹಾಗೂ ಯುವ ವಿಜ್ಞಾನ ಪ್ರಶಸ್ತಿ ಪ್ರದಾನದ ಜೊತೆಗೆ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯನ್ನು ಆಚರಿಸಿಕೊಂಡು ಬರಲಾಗುತ್ತಿದೆ.

3. ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರವಿದ್ಯಾ ಮಂಡಳಿ, ಬೆಂಗಳೂರು.

ವಿದ್ಯಾರ್ಥಿ ಯೋಜನಾ ಕಾರ್ಯಕ್ರಮ ನೈಸರ್ಗಿಕ ಸಂಪನ್ಮೂಲಗಳ ದತ್ತಾಂಶ ನಿರ್ವಾಹಣಾ ವ್ಯವಸ್ಥೆ (NRDMS) ಮಂಡಳಿಯ "ಮಳೆ ನೀರು ಸುಗ್ಗಿ ಉಸ್ತುವಾರಿ ಕೋಶ", ಕರ್ನಾಟಕ ರಾಜ್ಯ ಸ್ಪೇಷಿಯಲ್ ಡೇಟಾ ಇನ್‌ಫ್ರಾಸ್ಟ್ರಕ್ಚರ್ (KSSDI Project), ಪೇಟೆಂಟ್ ಮಾಹಿತಿ ಕೇಂದ್ರ, ಕಿರುಜಲ ವಿದ್ಯುತ್ ಯೋಜನೆ – ಪ್ರಾತ್ಯಕ್ಷತೆ ಕಾರ್ಯಕ್ರಮ, ಎಲೆಕ್ಟ್ರಾನಿಕ್ ತ್ಯಾಜ್ಯ ವಸ್ತುಗಳಲ್ಲಿನ ಲೋಹಗಳನ್ನು ಪುನರ್ ಪಡೆಯುವುದು (recovery) ಹಾಗೂ ಅದರಲ್ಲಿನ ಅಪಾಯಕರ ವಸ್ತುಗಳ ನಿರ್ವಹಣೆ ಸಿಮೆಂಟ್ ಕಾಂಕ್ರಿಟ್ ಮತ್ತು ಗಾರೆಯಲ್ಲಿ ಕುದುರೆಮುಖ ಕಬ್ಬಿಣದ ಅದಿರು ಟೈಲಿಂಗ್ಸ್‌ಗಳ ಬಳಕೆ ಸಮಗ್ರ ಜಲಾನಯನ ನಿರ್ವಹಣಾ ಕಾರ್ಯಕ್ರಮ (JWMP) ದಡಿಯಲ್ಲಿ ಜಲಾನಯನ ಅಭಿವೃದ್ಧಿ ಕಾರ್ಯಗಳ ಉಸ್ತುವಾರಿ, ಮೌಲ್ಯಮಾಪನ ಮತ್ತು ದಾಖಲಾತಿ ಹಂಪೆಯ ಚಾರಿತ್ರಿಕ ಪುರಾತನ ವಿಗ್ರಹ ಮತ್ತು ದೇವಾಲಯ ಗಳನ್ನು ಜಿಗೋಳಿಕ ಮಾಹಿತಿ ವ್ಯವಸ್ಥೆಯಲ್ಲಿ ಗಣಕೀಕರಣ "ಜಲಚಕ್ರದ ನಿರ್ವಹಣೆ–ವೈಜ್ಞಾನಿಕ ಮತ್ತು ತಾಂತ್ರಿಕ ಸಮಸ್ಯೆಗಳು ಹಾಗೂ ಪರಿಹಾರಗಳು" ಒಂದು ದಿನದ ಕಾರ್ಯಾಗಾರ ಭಾರತ–ಯೂರೋಪ್ ರಾಷ್ಟ್ರಗಳ ಒಕ್ಕೂಟ ಕಾರ್ಯಾಗಾರ–"ನೀರಿನ ತಾಂತ್ರಿಕತೆ, ಸಂಶೋಧನೆ ಮತ್ತು ಜಂಟಿ ಆವಿಷ್ಕಾರ"

4. ಜವಹರ್ ಲಾಲ್ ನೆಹರು ತಾರಾಲಯ, ಬೆಂಗಳೂರು.

ಬೆಂಗಳೂರು ಅಸೋಸಿಯೇಷನ್ ಫಾರ್ ಸೈನ್ಸ್ ಎಜುಕೇಷನ್/ ಜವಾಹರ್‌ಲಾಲ್ ನೆಹರು ತಾರಾಲಯದಲ್ಲಿ ಖಗೋಳ ವಿಜ್ಞಾನವನ್ನು ವಿದ್ಯಾರ್ಥಿಗಳಲ್ಲಿ ಮತ್ತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ನಿಟ್ಟಿನಲ್ಲಿ ಉದ್ದೇಶದಿಂದ ತಾರಾಮಂಡಲದ ಪ್ರದರ್ಶನದ ಜೊತೆಗೆ ಹಲವಾರು

ಖಗೋಳ ವಿಜ್ಞಾನಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಪ್ರಾರ್ತಕ್ಷಿಕೆಗಳನ್ನು ಆಯೋಜಿಸಲಾಗುತ್ತಿದೆ.

5. ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪಗಳ ಉಸ್ತುವಾರಿ ಕೇಂದ್ರ, ಬೆಂಗಳೂರು.

ವಿಕೋಪಗಳ ನಿರ್ವಹಣೆಯು ಪ್ರಮುಖವಾಗಿ ವಿಜ್ಞಾನ ಮತ್ತು ತಂತ್ರಜ್ಞಾನದಿಂದ ಒದಗಿಸುವ ವೈಜ್ಞಾನಿಕ ಮಾಹಿತಿಯ ಮೇಲೆ ಅವಲಂಬಿಸಿರುತ್ತದೆ. ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರವು ರಾಜ್ಯದಲ್ಲಿ ಮರುಕಳಿಸುವ ವಿಕೋಪಗಳ ನಿರ್ವಹಣೆಯಲ್ಲಿ ಬಹುಮುಖ್ಯ ಪಾತ್ರ ನಿರ್ವಹಿಸುವ ವೇದಿಕೆಯಾಗಿರುತ್ತದೆ. ಈ ಸಂಸ್ಥೆಯು ದೇಶದಲ್ಲಿಯೇ ಮಾದರಿ ಸಂಸ್ಥೆಯಾಗಿದ್ದು, ನೈಸರ್ಗಿಕ ವಿಕೋಪಗಳಾದ ಬರ, ನೆರೆಹಾವಳಿ, ಭೂಕಂಪನ, ಭೂಕುಸಿತ ವಿಷಯಗಳಿಗೆ ಸಂಬಂಧಿಸಿದಂತೆ ವೈಜ್ಞಾನಿಕ ಮಾಹಿತಿಯನ್ನು ಸಮಯೋಚಿತವಾಗಿ ಸರ್ಕಾರಕ್ಕೆ ನೀಡುತ್ತಿದೆ. ಈ ಕೇಂದ್ರವು ನೈಸರ್ಗಿಕ ವಿಕೋಪಗಳನ್ನು ಉಸ್ತುವಾರಿ ಮತ್ತು ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳಲು ತನ್ನದೇ ಆದ ದೇಶಿಯ ಪದ್ಧತಿಯನ್ನು ಅಳವಡಿಸಿಕೊಂಡು ಕಾರ್ಯನಿರ್ವಹಿಸುತ್ತಿದೆ.

ಮಾಸ್ಟರ್ ಕಂಟ್ರೋಲ್ ಫೆಸಿಲಿಟಿ ಎಂಬ ಕಟ್ಟಡದಲ್ಲಿ ಮುಖ್ಯ ನಿಯಂತ್ರಣ ಸೌಲಭ್ಯದಿಂದ ಸಾರ್ವಜನಿಕರಿಗೆ ಹವಾಮಾನ ಮಾಹಿತಿ, ಸಲಹೆ, ಮುನ್ಸೂಚನೆ ಹಾಗೂ ನೈಸರ್ಗಿಕ ವಿಪತ್ತುಗಳ ಬಗ್ಗೆ ಸಕಾಲಿಕವಾಗಿ ವರದಿ/ಸಲಹೆ/ಸೂಚನೆಗಳನ್ನು ನೇರವಾಗಿ ಅಥವಾ ಪರೋಕ್ಷವಾಗಿ ಪಡೆಯಲು ರೈತ ಸಮುದಾಯ, ಕೃಷಿ ಅವಲಂಭಿತ ವಲಯಗಳನ್ನು, ಮೀನುಗಾರಿಕೆ, ಸಾರಿಗೆ ವಲಯ, ಇಂಧನ ಮತ್ತು ವಿದ್ಯುಚ್ಛಕ್ತಿ, ನೀರಾವರಿ ವಲಯ ಮತ್ತು ರಾಜ್ಯ ಮತ್ತು ಜಿಲ್ಲಾ ಮಟ್ಟದ ವಿಪತ್ತು ನಿರ್ವಹಣಾ ಪ್ರಾಧಿಕಾರ ವಲಯಗಳಿಗೆ ಸಕಾಲದಲ್ಲಿ ಹವಾಮಾನ ಮುನ್ಸೂಚನೆ ವರದಿಯನ್ನು ನೀಡಲಾಗುತ್ತಿದೆ.

6. ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹ, ಬೆಂಗಳೂರು.

ಪ್ರೊ.ಸಿ.ಎನ್.ಆರ್.ರಾವ್, ಎಫ್.ಆರ್.ಎಸ್. ಇವರ ಅಧ್ಯಕ್ಷತೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಸಮೂಹವು ಪ್ರಾರಂಭಗೊಂಡಂದಿನಿಂದ (2008) ರಾಜ್ಯದಲ್ಲಿ ವಿಜ್ಞಾನ ಶಿಕ್ಷಣ ಮತ್ತು ಸಂಶೋದನೆಯ ಅಭಿವೃದ್ಧಿಗೆ

ಪೂರಕವಾದ ಪ್ರೋತ್ಸಾಹಕ ಯೋಜನೆಗಳ ಕಾರ್ಯಕ್ರಮಗಳು ಜಾರಿಗೊಳ್ಳುತ್ತಿವೆ. ಅಲ್ಲದೆ ರಾಜ್ಯದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಗುಣಮಟ್ಟದ ವಿಜ್ಞಾನ ಶಿಕ್ಷಣ ಮತ್ತು ಸಂಶೋಧನೆಗೆ ಪೂರಕವಾದ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವ ಕೆ-ಫಿಸ್ಟ್ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ.

ಸಂಖ್ಯೆ:ವಿಯಇ 228 ವಿತ್ರಮ 2011

(ಎ.ಎಸ್. ಮದ್ದಾವಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ,
ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

ವಸತಿ ಯೋಜನೆಗಳು

962 (1165) ಶ್ರೀ ಹ್ಯಾರೀಸ್ ಎನ್.ಎ. (ಶಾಂತಿನಗರ) : ಮಾನ್ಯ ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೀನುಗಾರಿಕಾ ಇಲಾಖೆಯ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸುತ್ತಿರುವ ವಸತಿ ಯೋಜನೆಗಳ ವಿವರಗಳೇನು; ಸದರಿ ಯೋಜನೆಗಳ ಮೂಲಕ ಕಳೆದ 2 ವರ್ಷಗಳಲ್ಲಿ ಎಷ್ಟು ಮನೆಗಳನ್ನು ಮೀನುಗಾರರಿಗೆ ಒದಗಿಸಿಕೊಡಲಾಗಿದೆ (ಜಿಲ್ಲಾವಾರು ಸಂಖ್ಯಾ ವಿವರಗಳನ್ನು ನೀಡುವುದು);

ಆ) ಮೀನುಗಾರಿಕೆ ಇಲಾಖಾ ಯೋಜನೆಗಳಿಗೆ ಕಳೆದ 2 ವರ್ಷಗಳಲ್ಲಿ ಕೇಂದ್ರ ಸರಕಾರದಿಂದ ಮಂಜೂರಾದ ಆರ್ಥಿಕ ನೆರವಿನ ಮೊತ್ತ ಮತ್ತು ಯೋಜನೆಗಳ ಜಾರಿಗಾಗಿ ವಿನಿಯೋಗ ಮಾಡಿದ ಮೊತ್ತದ ವಿವರಗಳನ್ನು ಒದಗಿಸುವುದು;

ಇ) ವಸತಿ ರಹಿತ ಮೀನುಗಾರರಿಗೆ ಪೂರ್ಣ ಪ್ರಮಾಣದಲ್ಲಿ ವಸತಿ ಸೌಲಭ್ಯವನ್ನು ಒದಗಿಸಿಕೊಡಲು ಸರಕಾರ ಹಮ್ಮಿಕೊಂಡ ಕ್ರಮಗಳೇನು?

ಶ್ರೀ ಆನಂದ ವಸಂತ ಅಸ್ನೋಟಿಕರ (ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) :

ಅ) ಮೀನುಗಾರಿಕೆ ಇಲಾಖೆಯಿಂದ ಮೀನುಗಾರರಿಗೆ ಮತ್ಸ್ಯಾಶ್ರಯ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ. 2009-10ರಲ್ಲಿ 5000 ಹಾಗೂ